ಕೊಡುತ್ತೇವೆ. ಒಂದು ವೇಳೆ ಅದನ್ನು ಮೇ ತಿಂಗಳಲ್ಲಿ ಮಾಡದಿದ್ದರೆ, ಆತನನ್ನು ಕಪ್ಪು ಪಟ್ಟಿಗೆ ಸೇರಿಸಿ, ಟೆಂಡರ್ ಷರತ್ತಿನ ಪ್ರಕಾರ, ರದ್ದುಪಡಿಸಿ ಜಿಲ್ಲಾ ಪಂಚಾಯಿತಿಯಿಂದ ಸಂಪೂರ್ಣಗೊಳಿಸಿಕೊಡುತ್ತೇವೆ.

ಉಪಾಧ್ಯಕ್ಷರು : ಶ್ರೀ ಶಿವರಾಮ್‌ರವರು ಕೇಳಿರುವ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ರಾಜ್ಯದಲ್ಲಿ ವೈದ್ಯಾಧಿಕಾರಿಗಳ ನೇಮಕ

159 - ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯ ಸಂಖ್ಯೆ ಎಷ್ಟು?

ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) :

ಅ) 733

ಆ) ಗ್ರಾಮೀಣಾ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ತಜ್ಞರ ಹುದ್ದೆಗಳನ್ನು ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ತುಂಬಲಾಗುವುದು.

ಶ್ರೀ ವೈಜನಾಥ್ ಪಾಟೀಲ್ : ಈ ತರಹ ವಿಶೇಷವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಮೊದಲೇ ದವಾಖಾನೆಗಳು ಕಡಿಮೆ, ಅದರಲ್ಲಿ ವೈದ್ಯರ ಕೊರತೆ ಬೇರೆ ಇದೆ. ಕೆಲವೊಂದು ಕಡೆ ಅಪಾಯಿಂಟ್‌ಮೆಂಟ್ ಆದರೂ ಕೂಡ, ಒಂದು ದಿವಸ ಹೋಗುತ್ತಾರೆ. ಮೂರು ದಿವಸ ಹೋಗುವುದಿಲ್ಲ. ಚಿಂಚೋಳಿ ಪ್ರಾಪರ್‌ನಲ್ಲಿ 5 ವೈದ್ಯರು ಬೇಕು. ಇಬ್ಬರು ಕೆಲಸ ಮಾಡುತ್ತಿದ್ದಾರೆ. ಅಲ್ಲೊಂದು ಎಕ್ಸ್-ರೆ ಮೆಷೀನ್ 3-4 ವರ್ಷಗಳಿಂದಿದೆ. ಟೆಕ್ನಿಷನ್ ಇಲ್ಲ. ಬಹಳಷ್ಟು ಸ್ಟಾಫ್ ಕೊರತೆಯಿದೆ. ಜನರಿಗೆ ತ್ರಾಸಾಗುತ್ತಿದೆ. ಸರ್ಕಾರದವರು ಈ. ಕಡೆ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಡಾ|| ಎಚ್.ಸಿ. ಮಹಾದೇವಪ್ಪ : ಖಾಲಿ ಹುದ್ದೆಗಳನ್ನು ತುಂಬಲು ಕ್ರಮಕೈಗೊಂಡಿದ್ದಾರೆ. 7ನೇ ತಾರೀಖು ಗುಲ್ಬರ್ಗಾಗೆ ಮುಖ್ಯಮಂತ್ರಿಗಳು ಭೇಟಿ ಕೊಟ್ಟ ಸಂದರ್ಭದಲ್ಲಿ ಇಂಟರ್‌ವ್ಯೂ ಮುಗಿದಿತ್ತು. ಮುಗಿದ ತಕ್ಷಣವೇ ಇನ್ನೊಂದು 4-5 ದಿನಗಳಲ್ಲಿ ಪೋಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ತುಂಬಲು ಆರೋಗ್ಯ ಇಲಾಖೆಗೆ ಯಾವುದೇ ನಿರ್ಬಂಧವಿಲ್ಲವೆಂದು ಹಣಕಾಸು ಇಲಾಖೆ ಈಗಾಗಲೇ ಹೇಳಿದೆ.

1.00 ಪಿ.ಎಂ

ಶ್ರೀ ವೈಜನಾಥ ಪಾಟೀಲ್ : ಈಗ ಬಹಳಷ್ಟು ಡಾಕ್ಟರುಗಳು ಹಳ್ಳಿಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಕಾರಣ ಏನೆಂದರೆ, ಅವರು ಸಿಟಿಗಳಲ್ಲಿ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. ಆದ್ದರಿಂದ,

ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡುವ ಕಾಲಕ್ಕೆ ಅಥವಾ ಅವರನ್ನು ಅಡ್ಮಿಷನ್ ಮಾಡುವ ಕಾಲಕ್ಕೆ ಹಳ್ಳಿಗಳಿಗೆ ಕಡ್ಡಾಯವಾಗಿ ಹೋಗಿ ಸೇವೆ ಸಲ್ಲಿಸಬೇಕು ಎಂದು ಒಂದು ಷರತ್ತು ವಿಧಿಸಿದರೆ ಡಾಕ್ಟರುಗಳು ಕಡ್ಡಾಯವಾಗಿ ಹಳ್ಳಿಗಳಿಗೆ ಹೋಗಿ ಸೇವೆ ಸಲ್ಲಿಸಬಹುದು. ಇದರ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರೋ?

ಡಾ|| ಹೆಚ್.ಸಿ. ಮಹದೇವಪ್ಪ : ಅವರ ಆಯ್ಕೆಯ ಸಮಯದಲ್ಲಿ ಒಂದು ಮ್ಯಾನ್‌ಡೇಟ್ ಇರುತ್ತದೆ. ಈ ರೀತಿ ಈರೆಗ್ಯೂಲಾರಿಟಿ ಆಗುವುದರ ಹಿನ್ನಲೆಯಲ್ಲಿ ಸಚಿವ ಸಂಪುಟ ರೆಗ್ಯೂಲೇಷನ್ ಆಫ್ ನರ್ಸಿಂಗ್ ಹೋಂ ಕಾಯಿದೆ ತರುವುದಕ್ಕೆ ಪರಿಶೀಲನೆ ಮಾಡುತ್ತಿದೆ. ಅದು ಬಂದ ಮೇಲೆ ಸರ್ಕಾರಕ್ಕೆ ಬಿಗಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಿದ್ದರೆ ಅದನ್ನು ಪರಿಶೀಲಿಸಿ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಲೇಡಿ ಮೆಡಿಕಲ್ ಆಫೀಸರ್ಸ್ ಈಗ ಯಾವ ತಾಲ್ಲೂಕಿನಲ್ಲೇ ಇಲ್ಲ. ಇದಕ್ಕೆ ಏನಾದರೂ ವಿಶೇಷ ನೇಮಕಾತಿಯನ್ನು ತಾವು ಮಾಡುತ್ತೀರಾ?

DR. H.C. MAHADEVAPPA : There are some hospitals which are specifically sanctioned for Lady Medical Officers. 1600 ಆಸ್ಪತ್ರೆಗಳು ಇದ್ದರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಲೇಡಿ ಮೆಡಿಕಲ್ ಆಫೀಸರ್ಸ್ ಬರುವುದಿಲ್ಲ. ಎಲ್ಲೆಲ್ಲಿ ಭಾರತ ಸರ್ಕಾರದ ಮಾದರಿಯಂತೆ ಮೇಲ್ ಅಂಡ್ ಫೀಮೇಲ್ ಎಂದು ಇದೆ, ಅಲ್ಲಿ ಸ್ಯಾಂಕ್ಷನ್ ಪೋಸ್ಟ್ ಇದೆ. ಇಂತಹ ಪೋಸ್ಟ್‌ಗಳನ್ನು ತುಂಬುವುದಕ್ಕೆ ಸಾಧ್ಯವಿದೆ. ಉಳಿದವುಗಳನ್ನು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಿದ್ದರೂ ಕೂಡ ಸರ್ಕಾರ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದು, ಒಂದು ವಾರದಲ್ಲಿ ಕನಿಷ್ಠ 2-3 ದಿನವಾದರೂ ಮಹಿಳಾ ವೈದ್ಯರು ಬಂದು ಸೇವೆ ಸಲ್ಲಿಸಬೇಕು ಎಂದು ಇದೆ. ಇದರಲ್ಲಿ ಖಾಸಗಿಯವರೂ ಕೂಡ ಬಂದು ಸೇವೆ ಸಲ್ಲಿಸಬಹುದು, ಇಂತಹವರಿಗೆ ಸುಮಾರು 2000 ರೂ.ಗಳನ್ನು ವೇತನ ರೂಪದಲ್ಲಿ ಕೊಡಬೇಕು ಎನ್ನುವ ಒಂದು ಯೋಜನೆ ಮಾಡಿದ್ದೇವೆ. ತಮಗೆ ಅಂತಹವರು ಯಾರಾದರೂ ಭೇಟಿಯಾದರೆ ದಯವಿಟ್ಟು ತಿಳಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಹೇಳುತ್ತಿರುವುದು ಸ್ಯಾಂಕ್ಷನ್ ಪೋಸ್ಟ್ ಖಾಲಿ ಇರುವುದರ ಬಗ್ಗೆ.....

ಡಾ|| ಹೆಚ್.ಸಿ. ಮಹದೇವಪ್ಪ : ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಅಂತಹ ಸುಮಾರು 150 ರಿಂದ 165 ಪೋಸ್ಟ್‌ಗಳು ಖಾಲಿ ಇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉದಾಹರಣೆಗೆ ಹೇಳಬೇಕಾದರೆ, ತಿಪಟೂರು, ಚಿಕ್ಕನಾಯಕನಳ್ಳಿ, ಬೆಳಗೆರೆ, ಹುಳಿಯಾಳ, ಇಲ್ಲಿ ಖಾಲಿ ಇದೆ. ಅಲ್ಲಿ ಎಲ್ಲಾ ಸ್ಯಾಂಕ್ಷನ್ ಪೋಸ್ಟ್ ಖಾಲಿ ಇದೆ. ನೀವು ಕಂಟ್ರಾಕ್ಟ್‌ದಾರರನ್ನು ಅಲ್ಲಿಗೆ ಹಾಕುವುದಕ್ಕೆ ಬರುವುದಿಲ್ಲವೇ?. ರೇಗ್ಯುಲರ್ ಆಗಿ ನೇಮಕಾತಿ ಮಾಡಿ ಪೋಸ್ಟಿಂಗ್ ಕೂಡ ಕೊಡುತ್ತಿಲ್ಲ. ಈ ಸ್ಯಾಂಕ್ಷನ್ ಪೋಸ್ಟ್ ಖಾಲಿ ಇರುವುದರಿಂದ, ಇವುಗಳನ್ನು ತುಂಬುವುದಕ್ಕೆ ತಮಗೆ ಏನು ತೊಂದರೆ ಇದೆ?

ಡಾ|| ಹೆಚ್. ಸಿ. ಮಹದೇವಪ್ಪ : ಸ್ಯಾಂಕ್ಷನ್ಡ್ ಪೋಸ್ಟ್ ತುಂಬಿಕೊಳ್ಳುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಸಭಾನಾಯಕರು) : ಈ ದಿನದ ಲಿಖಿತ ಮೂಲಕ ಉತ್ತರಿಸುವ 11ನೇ ಪ್ರಶ್ನೆಗಳ ಪಟ್ಟಿಯಲ್ಲಿನ 35 ಪ್ರಶ್ನೆಗಳ ಪೈಕಿ 22 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ಹಾವೇರಿ ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕಾತಿ

654 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಆಸ್ಪತ್ರೆವಾರು ವಿವರ ನೀಡುವುದು)

ಆ) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ, ಹಾಗಿದ್ದಲ್ಲಿ ಈ ಪ್ರಕ್ರಿಯೆಯನ್ನು ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ) :

ಅ) 22 (ತಾಲ್ಲೂಕುವಾರು ವಿವರ ಲಗತ್ತಿಸಿದೆ)

ಆ) ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಪ್ರಕ್ರಿಯೆ ಮುಗಿದಿದ್ದು 20 ಮಂದಿ ವೈದ್ಯರನ್ನು ನೇಮಕ ಮಾಡಲಾಗಿದೆ.

ಹಾವೇರಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ತಾಲ್ಲೂಕುವಾರು, ಆಸ್ಪತ್ರೆಗಳ ವಿವರ

1)	ಎ.ಡಿ.ಹೆಚ್.ಓ. ಹಾವೇರಿ	-	1
2)	ಎನ್ಎಲ್ಸಿಸಿ, ಹಾನಗಲ್	-	1
3)	ಪ್ರಾಥಮಿಕ ಆರೋಗ್ಯ ಕೇಂದ್ರ, ನರೇಗಲ್, ಹಾನಗಲ್ ತಾಲ್ಲೂಕು	-	1
4)	ಸಿಹೆಚ್ಸಿ, ಹಿರೇಕೆರೂರು, ಹಿರೇಕೆರೂರು ತಾಲ್ಲೂಕು	-	6
5)	ಪ್ರಾಥಮಿಕ ಆರೋಗ್ಯ ಕೇಂದ್ರ ಕುಡಪಲಿ, ಹಿರೇಕೆರೂರು ತಾಲ್ಲೂಕು	-	1